

## 'ನನ್ನ ಮಡದಿ ನನ್ನ ಅತ್ಯುತ್ತಮ ಗೆಳತಿ'

–ಚಂದ್ರಶೇಖರ ಕಂಬಾರ

ಬಹುತೇಕ. ಆದರ ನಾಟಕಗಳನ್ನೂ ನಾನು ಆಮೇಲಾಮೇಲೆ ನೋಡೋಕೆ ಶುರು ಮಾಡಿದ್ದು. ಮಕ್ಕಳು ಸಣ್ಣವರಿದ್ದಾಗ ನೋಡೋಕೆ ಆಗ್ತಿರಲಿಲ್ಲ.

◆ **ಮೇಷ್ಟ್ರು ಸಿನಿಮಾ ರಂಗಕ್ಕೆ ಹೋದಾಗ ಆತಂಕ ಆಯ್ತೇನು?**

ಹಾಂಗೇನಿಲ್ರಿ. ಸ್ವಲ್ಪ ತಡವಾಗಿ ಬರ್ತಿದ್ರು ಅನ್ನೋದು ಬಿಟ್ರೆ, ಇನ್ನೇನಿರಲಿಲ್ಲ. ಆವಾಗಲೂ ಯಾರಾದರೂ ಗೆಳೆಯರು ಮನೆತನಕ ಬಂದು ತಡವಾಯ್ತು ಅಂತ ಹೇಳಿ ಬಿಟ್ಟುಹೋಗ್ತಿದ್ರು. ಯಾವಾಗಲಾದರೊಮ್ಮೆ ನನ್ನನ್ನೂ ಶೂಟಿಂಗ್‌ಗೆ ಕರ್ಕೊಂಡು ಹೋಗ್ತಿದ್ರು. ಒಮ್ಮೆ ಡಬ್ಬಿಂಗ್‌ಗೆ ಹೋಗಿದ್ದೂ ನೆನಪಿನಲ್ಲಿದೆ.

◆ **ಭಾರತದ ಎಲ್ಲ ಮಹತ್ವದ ಪ್ರಶಸ್ತಿಗಳೂ ಕಂಬಾರರಿಗೆ ಸಿಕ್ಕಿವೆ...**

ಆಶಾದೇವಿ, ನಾನು ನನ್ನ ನಾಲ್ಕನೇ ವಯಸ್ಸಿನಿಂದ ಇವರನ್ನ ನೋಡಿದವಳು, ಇಷ್ಟಪಟ್ಟೋಳು. ನಾನು ಶಾಲೆಗೆ ಹೋಗೋವಾಗಲೂ, ದೊಡ್ಡ ದೊಡ್ಡ ಲೇಖಕರ ಪುಸ್ತಕಗಳನ್ನ ನೋಡ್ತಾ ಇದ್ದಾಗ, ಇವರೂ ಹೀಗೇ ದೊಡ್ಡ ಲೇಖಕರಾಗಬೇಕು ಅಂತ ಕನಸು ಕಂಡಿದ್ದೆ. ಇವರು ಇಷ್ಟು ದೊಡ್ಡ ಲೇಖಕರು ಅನ್ನುವ ಹೆಗ್ಗಳಿಕೆ ಪಡೆದದ್ದು ನೋಡಿದಾಗಲೆಲ್ಲ ನನಗೆ, ನನ್ನ ಕನಸೇ ನನಸಾಗಿದೆ ಅನ್ನುವಷ್ಟು ಸಂತೋಷ. ನಿಜ ಅಂದ್ರ ಅವರಿಗಾಗೋದಕ್ಕಿಂತ ಹೆಚ್ಚಿನ ಸಂತೋಷ ನನಗಾಗ್ತದ.

◆ **ನಿಡುಗಾಲದ ಈ ದಾಂಪತ್ಯದಲ್ಲಿ ನಿಮಗೆ ಸಂತೋಷ ಕೊಡುವ ವಿಷಯ ಯಾವುದು?**

ಇದೇ ಅಂತ ಹೇಳಲಾರೆ. ಆದರೆ ನಾವು ಒಬ್ಬರನ್ನೊಬ್ಬರು ಎಷ್ಟು ಅವಲಂಬಿಸಿದ್ದೀವಿ, ಎಷ್ಟು ಒಬ್ಬರೊಳಗೊಬ್ಬರು ಬೆರೆತು ಹೋಗೇವಿ ಅನ್ನೋದನ್ನ ಹೇಳೋದು ನನಗ ಕಷ್ಟ. ಈಗಲೂ ಅವರನ್ನ ನೋಡೋದು, ಮಾತುಕತೆ, ಜಗಳ ಇದೆಲ್ಲಾ ನನಗೆ ಬಹಳ ಸೇರ್ತದ. ಇವರು ಎಲ್ಲಿಗಾದರೂ ಹೋದರ, ಯಾವಾಗ ಬರ್ತಾರೋ ಅಂತ ಕಾಯ್ತೀನಿ. ಇವರನ್ನ ನೋಡಿದ ಕೂಡಲೇ ಅದೆಷ್ಟು ಆನಂದ ಆಗ್ತದ ನನಗ... ಇವರೂ ಅಷ್ಟ. ಅದೆಷ್ಟು ಕಾಳಜಿ ನನ್ನ ಮ್ಯಾಲ. ನನಗ ಆರಾಮಿಲ್ಲ ಅಂದ್ರ ಒದ್ದ್ಯಾಡಿ ಹೋಗ್ತಾರ. ಈ ಕಕ್ಕುಲಾತಿ, ನಿರ್ಮಲ ಪ್ರೇಮ ಇವ ನನ್ನ ಸಂಪತ್ತು ಅಂತ ನಾನು ತಿಳದೇನಿ.

◆ **ಅಲ್ಲಾ, ನಿಮ್ಮ ಸೀರೀನೂ ಅವರ ಆರಿಸೋದು ಯಾಕೆ? ನಿಮಗೆ ನಿಮ್ಮದೇ ಆಯ್ಕೆ ಇರುತ್ತಲ್ವಾ?**

ಅದಕ್ಕ ಅವರಂತಾರ, ಅಲ್ಲಾ ಮತ್ತ ನೋಡಿ ಮೆಚ್ಚಬೇಕಾದಂವ ನಾನು, ಅದಕ್ಕ ನನಗ ಚಲೋ ಕಾಣಿಸೋ ಸೀರಿ ತರ್ತೀನಿ. ನೀ ನನಗ ಚೆಂದ ಕಂಡ್ರ ಆಯ್ತಲ್ವಾ...

◆ **ಸರಿ, ಆದರ ನಮಗೂ ನಮ್ಮದ ಇಷ್ಟ, ಆಯ್ಕೆ ಇರ್ತಾವಲ್ಲ...**

ಕೆಲವೊಮ್ಮೆ ಇವರು, ಮಕ್ಕಳು, ಕರ್ಕೊಂಡು ಹೋಗಿ 'ನೀನ ಆರಿಸು' ಅಂದ್ರ ನನಗ ಬಹಳ ತ್ರಾಸಾಗ್ತದ. ನಾನ ಆರಿಸಿಕೊಂಡ ಬಂದ ಸೀರಿ ನನಗ ಇಷ್ಟ ಆಗದ ಒಮ್ಮೆ ಇಂದಿರಾ ಲಂಕೇಶ್ ಅವರ ಜೋಡಿ ಹೋಗಿ ಮತ್ತ ಬದಲಾಯಿಸಿಕೊಂಡು ಬಂದಿದ್ದೆ.

◆ **ಯಾವುದಾದರೂ ಪ್ರಸಂಗ ನಿಮಗ ಬಹಳ ಸಂತೋಷ ಕೊಡೋ ಅಂಥದ್ದು...**

ಇವರು ಯಾವಾಗಲೂ ಹೇಳ್ತಿರ್ತಾರ, ನಾನು ಹುಟ್ಟಿದಾಗ ಇವರು ನನ್ನನ್ನ ನೋಡೋಕ ಬಂದಿದ್ರಂತ. ಮಲಗಿದ್ದ ಮುದ್ದಾದ ಮಗು ನೋಡಿ ಅನ್ಕೊಂಡ್ರಂತ, 'ಮದುವ್ಯಾದರ ಇಂಥ ಚೆಂದನ್ನ ಚೆಲುವಿನಾ ಆಗಬೇಕು' ಅಂತ. ನೀ ಹುಟ್ಟಿದಾಗಿಂದ ನಿನ್ನ ಪ್ರೀತಿ ಮಾಡೇನಿ ನಾನು ಅಂತ ರೇಗಿಸ್ತಿರ್ತಾರ. ಅದೇ ಖರೆ ಅಂತ ನಾ ತಿಳಿದೇನಿ. ಒಬ್ಬರನ್ನೊಬ್ಬರು ಜೋಪಾನ ಮಾಡಿಕೊಂಡು ಸಾಗಿಸ್ತಾ ಇದ್ದೇವಿ. ನನಗನ್ನಿಸ್ತದ, ನಮ್ಮ ಸಂಬಂಧ ಯಾವಾಗಿಂದನೂ ಇರೋದ... ಇದನ್ನ ಬಿಟ್ಟು ಯೋಚನೆ ಮಾಡೋದೇ ನನಗ ಸಾಧ್ಯ ಇಲ್ಲ. ಒಮ್ಮೆ ಇವರೆಲ್ಲೋ ಹೋಗಿದ್ದಾಗ ನನ್ನನ್ನ ಆಸ್ಪತ್ರೆಗೆ ಸೇರಿಸೋ ಪ್ರಸಂಗ ಬಂದಿತ್ತು. ಮನಿಗೆ ಬಂದವರೆ ಇದನ್ನ ಕೇಳಿ, ವರಾಂಡದೊಳಗೇ ಕೂತುಬಿಟ್ಟಿದ್ರು. ನಾ ಹೇಳ್ತೇನಲ್ಲ, ಇದೊಂದು ಬಿಟ್ಟಿರಲಾಗದ ಪ್ರೀತಿ. ಈ ವಯಸ್ಸಿನಾಗೂ ಉಳದದ ಅಂದ್ರ ಅದೊಂದು ಪುಣ್ಯ.